ಗುಲ್ಬರ್ಗ ಜಿಲ್ಲೆಯಲ್ಲಿ ಬೆಳೆ ವಿಮೆ ನೀಡುವುದು

1368 (1757) ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಗುಲ್ಬರ್ಗ ಜಿಲ್ಲೆಯಲ್ಲಿ ಬೆಳೆ ವಿಮೆ ಮಾಡಿಸಿರುವ ಬಡ ರೈತರಿಗೆ ಬೆಳೆ ವಿಫಲವಾಗಿದೆ ಎಂದು ವರದಿ ನೀಡಿದರೂ ಸಹ ಬೆಳೆ ವಿಮಾ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಡ ರೈತರಿಗೆ ಬೆಳೆ ವಿಮಾ ಸಿಗುವ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಕಳೆದ ವರ್ಷ ಅಂದರೆ ಮುಂಗಾರು-2001ರಲ್ಲಿ ಬೆಳೆ ವಿಮೆ ಮಾಡಿಸಿರುವ ರೈತರಿಗೆ ಬೆಳೆ ವಿಫಲವಾಗಿರುವುದರಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಬೆಳೆ ವಿಮೆ ಮಾಡಿಸಿದ ರೈತರಿಗೆ ಸುಮಾರು ರೂ.21.89 ಕೋಟಿಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ಅಂದಾಜು ಮಾಡಿದ್ದು, ಭಾರತೀಯ ಸಾಮಾನ್ಯ ವಿಮಾ ನಿಗಮವು ರೈತರಿಗೆ ಪಾವತಿಸಲು ಕ್ರಮ ಕೈಗೊಂಡಿದೆ.

ಆ) ಈಗಾಗಲೇ ಭಾರತೀಯ ಸಾಮಾನ್ಯ ವಿಮಾ ನಿಗಮವು ದಿನಾಂಕ:12-7-2002 ರವರೆಗೆ ಎರಡು ಕಂತುಗಳಲ್ಲಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಿದ್ದು, ಮೂರನೇ ಕಂತನ್ನು ಜುಲೈ 31, 2002 ರೊಳಗೆ ಪಾವತಿಸಲು ಕ್ರಮ ಕೈಗೊಂಡಿದೆ.

ಧಾರವಾಡ – ಹುಬ್ಬಳ್ಳಿ ಮಾರುಕಟ್ಟೆಯ ಹಮಾಲರಿಗೆ ವಸತಿ ಗೃಹ ನಿರ್ಮಾಣ

1369 (1754) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಮತ್ತು ಹುಬ್ಬಳ್ಳಿ ಮಾರುಕಟ್ಟೆಯ ಹಮಾಲರಿಗಾಗಿ ರಾಜೀವ್ ಗಾಂಧಿ ವಸತಿ ನಿಗಮದ ಸಹಯೋಗದಿಂದ ವಸತಿ ಕಟ್ಟಡ ಕಟ್ಟಿಸಿಕೊಡಲಾಗಿದೆಯೆ, ವಿವರ ನೀಡುವುದು;

ಆ) ಧಾರವಾಡದಲ್ಲಿ ಎಷ್ಟು ಜನ ಹಮಾಲರು ಇರುವುದು; ಅವರಿಗಾಗಿ ಯಾವ ಯೋಜನೆ ಈವರೆಗೆ ಮಾಡಲಾಗಿದೆ;

ಇ) ಧಾರವಾಡ ಹುಬ್ಬಳ್ಳಿ ಮಾರುಕಟ್ಟೆಯ ಹಮಾಲರ ಸಂಖ್ಯೆ ಹಾಗೂ ಬೇಡಿಕೆಯ ವಿವರವಾದ ಮಾಹಿತಿ ನೀಡುವುದು. ಇವರಿಗೆ ಆದ್ಯತೆಯಿಂದ ವಸತಿ ಕಟ್ಟಡಗಳನ್ನು ಕಟ್ಟಿಸುವ ಯೋಜನೆ ಇದೆಯೇ ತಿಳಿಸುವುದು.

ಈ) ರಾಜ್ಯದಲ್ಲಿ ಮಾದರಿಯಾದ ಹಮಾರ ವಸತಿ ಸಮುಚ್ಚಯ ಯಾವುದು ತಿಳಿಸುವುದು?

ಶ್ರೀ ಬಿ.ಎಸ್.ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ಅಲ್ಲ.

ಆ) 77 ಜನ ಹಮಾಲರಿದ್ದು, ಹಮಾಲರ ವಿಮಾ ಯೋಜನೆಯನ್ನು ಜಾರಿ ಮಾಡಲಾಗಿದೆ. ವಸತಿ ಯೋಜನೆಗಾಗಿ ಬೇಡಿಕೆ ಇದ್ದು, ಜಮೀನು ಸ್ವಾಧೀನತೆ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ಧಾರವಾಡದಲ್ಲಿ 77 ಹಾಗೂ ಹುಬ್ಬಳ್ಳಿಯಲ್ಲಿ 610 ಹಮಾಲರು ಇರುತ್ತಾರೆ. ಹುಬ್ಬಳ್ಳಿಯಲ್ಲಿ ಈಗಾಗಲೇ 132 ಜನ ಹಮಾಲರಿಗೆ ವಸತಿ ಗೃಹ ನಿರ್ಮಿಸಿ ಹಂಚಲಾಗಿದೆ. ಹೆಚ್ಚುವರಿ ಬೇಡಿಕೆಯ ಬಗ್ಗೆ ಸಮಿತಿಯ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. ಧಾರವಾಡದಲ್ಲಿ ವಸತಿ ಯೋಜನೆಗೆ ಬೇಡಿಕೆ ಇದ್ದು ಜಮೀನು ಸ್ವಾಧೀನ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಹುಬ್ಬಳ್ಳಿಯಲ್ಲಿ ಹಮಾಲರ ವಸತಿ ಯೋಜನೆಯಡಿ ನಿರ್ಮಿಸಿರುವ ವಸತಿ ಸಮುಚ್ಚಯ.